
ಬಾಲ್ಕನಿಯಿಂದ ಇಳಿದು ಕೆಳಗೆ ಬಂದ. ಪ್ರತಿ ದಿನದಂತೆ ಅವತ್ತು ಮರದ ನೆರಳಿನ ತಂಪಿನ ಬದಲಾಗಿ ಬಿಸಿಲು ಮೈಗೆ ತಾಕಿತು. ನಿನ್ನೆಯೇ ಕಡಿಯಲಾಗಿದ್ದ ಆಲದ ಮರದ ಎಲೆಗಳು ಅಲಲ್ಲಿ ಚೆಲ್ಲಾಡಿದ ಕರುಳಿನಂತೆ ಹರಡಿಕೊಂಡಿದ್ದವು. ಅಸ್ತಿತ್ವವೇ ಇಲ್ಲದ ಅವು ಗಾಳಿಗೆ ಅತ್ತಿತ್ತ ಹಾರಾಡತೊಡಗಿದ್ದವು. ಹಾರಾಡುತ್ತಿದ್ದ ಎಲೆಗಳನ್ನೇ ತೀರಾ ಧ್ಯಾನಸ್ಥನಂತೆ ನೋಡಿಕೊಳ್ಳುತ್ತ ನಿಂತಿದ್ದ ತಿಮ್ಮಣ್ಣನಿಗೆ ತನ್ನ ಕರುಳೇ ಹರಿದು ಛಿದ್ರ ಆಗಿವೆ ಅನಿಸಿ ಸಮಾಧಾನ ಇಲ್ಲವಾಗಿತ್ತು. ಅಡ್ಡಾಡೋ ದಾರಿಯಲಿ ಉದ್ದಕ್ಕೆ ಬಿದ್ದಿದ್ದ, ಮಾತಾಡಿಕೊಂಡು ನಿಂತಿದ್ದ ಐದಾರು ಜನರ ನೆರಳು ಅಣಕಿಸಿ ನಕ್ಕಂತಾಯಿತು. ಏನೋ ಆದವರಂತೆ ದಡಬಡಿಸುತ್ತಲೇ ಕೆಳಗಿಳಿದು ಬಂದ. ಅಲ್ಲಿಯೇ ಬಿದ್ದಿದ್ದ ಒಂದೆರಡು ಎಲೆಗಳನ್ನು ಆರಿಸಿ ಎದಿಗೊತ್ತಿಕೊಂಡು ಸುತ್ತಲೂ ಕಣ್ಣು ಹರಿಬಿಟ್ಟ. ಚೂರು ಅಂಗುಲ ಸಪಾಟಾಗಿ ನಿಂತಿದ್ದ ದೊಡ್ಡ ಬಡ್ಡಿವೊಂದನ್ನ ಬಿಟ್ಟರೆ ಅಲ್ಲಿ ಗಿಡ ಒಂದಿತ್ತು ಅನ್ನಲು ಯಾವುದೇ ಪುರಾವೆಯಿರಲಿಲ್ಲ.

ಈಗ ಬಾಲ್ಕನಿಯಲಿ ನಿಂತು ಗಿಡದ ಬಡ್ಡಿಯನ್ನೇ ನೋಡುವುದು, ಒಳಗೇ ಒಬ್ಬನೇ ಕೂತು ಅಳುವುದು ತಿಮ್ಮಣ್ಣನಿಗೆ ದಿನದ ಕಾಯಕವೇ ಆಗಿ ಹೋಯಿತು. ಈಗೀಗಂತೂ ಕಾಣದಂತಾಗಿದ್ದ ಆಲದ ಗಿಡದ ಆ ದೊಡ್ಡ ದೊಡ್ಡ ಬಿಳಲುಗಳು ಆತನ ಕೊರಳಿಗೆ ಉರುಳಾದಂತೆ ಅನಿಸತೊಡಗಿದ್ದವು. 'ದಿನಾ ನಾನವತ್ತ ಹೋಗಬಾರದಾಗಿತ್ತ. ಗಿಡ ಉಳೀತಿತ್ತೋ? ಇಲ್ಲೋ? ಯಾಕ ಕಣ್ಣೀಗ ಕಾಣದಂಗ ದೂರಾತು? ನಾನ ಹೋಗಬಾರದಿತ್ತ'. ಹೀಗೆ ಒಬ್ಬನೇ ಮಾತಾಡಿಕೊಂಡು ಚಿಟ್ಟನೇ ಚೀರುತ್ತಿದ್ದ. ಎರಡ ದಿನ ಮನೆಯಿಂದ ತಿಮ್ಮಣ್ಣ ಹೊರಗೆ ಬರಲಿಲ್ಲ. ವೈಶಾಲಿ ಹಾಕಿದ್ದ ರಂಗೋಲಿಗಳಿಗೆ ಎರಡು ದಿನದಿಂದ ಕಳೆಯೇ ಇರಲಿಲ್ಲ.

ಹಿಂದಿನ ದಿನ ರಾತ್ರಿ ತಿಮ್ಮಣ್ಣನ ಮನೆಯಿಂದ ಚಿಟ್ಟನೇ ಚೀರುವ ಸಪ್ಪಳ, ಸಾಮಾನು ಬಿದ್ದ ಸದ್ದು ನಿರಂತರವಾಗಿತ್ತು. ಸಮಾಧಾನ ಆಗಲಾರದಕ್ಕೆ ಶ್ಯಾಮಣ್ಣನ ತೆಕ್ಕೆಯಲ್ಲಿದ್ದ ವೈಶಾಲಿ, 'ಏನ ಆಗಾಕತ್ತೈತಿ ರೀ ಅಲ್ಲೇ' ಅಂತ ಕೇಳಿದ್ದಳು. 'ಮುಂಜಾಲೇನ ಇಬ್ರೂ ಹೋಗಿ ನೋಡೂಣಂತ' ಅಂದಿದ್ದ ಶ್ಯಾಮಣ್ಣ ಅವಳ ಎದೆಯಲ್ಲಿ ತನ್ನ ಮುಖವಿಟ್ಟದ್ದ. ವೈಶಾಲಿಗೆ ಖಬರೇ ಹಾರಿ ಹೋದಂತಾಗಿತ್ತು. ಮುಂಜಾನೆಯೇ ಗಂಡ



ಹೆಂಡತಿ ಇಬ್ಬರೂ ತಿಮ್ಮಣ್ಣನ ಮನೆಯೊಳಗೆ ಹೊಕ್ಕರು. ಮನೆ ಪೂರ್ತಿ ಅಸ್ತವ್ಯಸ್ತವಾಗಿತ್ತು. ಅಲ್ಲೇ ಪಕ್ಕದಲಿ ಹಾಸಿಗೆ ಮೇಲೆ ಬಿದ್ದಿದ್ದ ತಿಮ್ಮಣ್ಣನಿಗೆ ಹೊರ ಜಗತ್ತಿನ ಅರಿವೆಯೇ ಇರಲಿಲ್ಲ. ಇದನ್ನ ನೋಡಿದ ಕೂಡಲೇ ವೈಶಾಲಿ ಕಣ್ಣಲಿ ನೀರು ಜಿನುಗಿದರೂ ಅವುಗಳನ್ನ ಹತ್ತಿಕ್ಕಿ ಸೀರೆ ಸೆರಗನ್ನು ಬಾಯಿಗಿಟ್ಟುಕೊಂಡಳು.

ತಿಮ್ಮಣ್ಣ ಚಡ್ಡಿಮೇಲೆಯೇ ರೂಂ ತುಂಬಾ ಉಚ್ಚಿಹೊಯ್ಕೊಂಡಿದ್ದನ್ನು ನೋಡಿ, ಅದೇ ಹಸಿ ಚಡ್ಡಿಮೇಲೆಯೇ ಇದ್ದದ್ದನ್ನ ಕಂಡ ಶ್ಯಾಮಣ್ಣ, ವೈಶಾಲಿಗೆ ಹೊರಗೆ ಹೋಗುವಂತೆ ಸನ್ನೆ ಮಾಡಿದ. ಅವಳ ಮನಸ್ಸಿನಲ್ಲಿ ಏನೋ ಒಂದು ಕಳಚಿ ಹೋದ ಅನುಭವ. ಗಂಡ ಹೆಂಡತಿ ಇಬ್ಬರೂ ಜೋಡೀಲೆ ಬಂದಿದ್ದನ್ನು ನೋಡಿದ ತಿಮ್ಮಣ್ಣ, ಅವರನ್ನು ದಿಟ್ಟಿಸುತ್ತ 'ಮರ ಉಳೀತ್ತಿತ್ತ? ಇಲ್ಲಾ?' ಎಂದು ಜೋರಾಗಿ ಚೀರಲು ಶುರುವಿಟ್ಟ. ಹೊರಗೆ ಬಂದು ನಿಂತಿದ್ದ ವೈಶಾಲಿ ಸೆರಗನ್ನು ಬಾಯಲ್ಲಿಟ್ಟುಕೊಂಡು ಬಿಕ್ಕತೊಡಗಿದಳು. ಬೆಳ್ ಬೆಳಿಗ್ಗೆ ಹೊರಗಡೆ ಗಾಳಿ ಜೋರಾಗಿ ಬೀಸತೊಡಗಿತ್ತು. ನಿನ್ನೆಗಿಂತ ಹೆಚ್ಚು ಒಣಗಿ ಕರಕಿಟ್ಟು ಹರವಿಕೊಂಡಿದ್ದ ಆಲದ ಎಲೆಗಳು ಗಾಳಿ ರಭಸಕ್ಕೆ ಮೇಲೆ ಹಾರಾಡತೊಡಗಿದ್ದವು. ಮತ್ತೊಂದಿಷ್ಟು ಯಾವುದಾದರೂ ಗಾಡಿಗಳು ಹೋದರೆ ಗಾಡೀ ಹೋದ ರಭಸಕ್ಕೆ ಹಿಂಬಾಲಿಸಲು ಶುರು ಮಾಡಿದ್ದವು.

ಮನೆಯೊಳಗೆ 'ಮರ ಉಳೀತ್ತಿತ್ತ? ಇಲ್ಲಾ?' ಅನ್ನುವ ತಿಮ್ಮಣ್ಣನ ಚೀರಾಟ ಹಾಗೇ ಮುಂದುವರೆದೇ ಇತ್ತು.

●